# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 378 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 07.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ 6 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯ "ಅಳವಂಡಿ-ಬೇಟಗೇರಿ" ಏತ ನೀರಾವರಿ ಯೋಜನೆಗೆ ಎಷ್ಟು ವಿಸ್ತೀರ್ಣದ (ಎಕರೆ/ಹೆಕ್ಟೇರ್) ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; (ತಾಲ್ಲೂಕುವಾರು/ ಗ್ರಾಮವಾರು ಸಂಪೂರ್ಣ ವಿವರ ನೀಡುವುದು) | 1) ಅಳವಂಡಿ ಬೇಟಗೇರಿ ಏತ ನೀರಾವರಿ ಯೋಜನೆಯ ಜಾಕ್‌ವೆಲ್, ರೈಸಿಂಗ್ ಮೇನ್ ಹಾಗೂ ಡೆಲಿವರಿ ಚೇಂಬರ್ ಸಲುವಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ವಿವರ.<br>**<u>ಕೊಪ್ಪಳ ತಾಲ್ಲೂಕಿನಲ್ಲಿ ಬರುವ ಗ್ರಾಮಗಳು</u>**<br>ಕವಲೂರು 05-18 ಎಕರೆ<br>ಅಳವಂಡಿ 02-15 ಎಕರೆ<br>ಬೇಟಗೇರಿ 13-25 ಎಕರೆ<br>ಮೋರನಹಳ್ಳಿ 00-09 ಎಕರೆ<br>ಹನಕುಂಟಿ <u>04-36 ಎಕರೆ</u><br>**<u>ಒಟ್ಟು: 36-23 ಎಕರೆ</u>** |
| | | 2) ಅಳವಂಡಿ ಬೇಟಗೇರಿ ಏತ ನೀರಾವರಿ ಯೋಜನೆಯಲ್ಲಿ ಕಾಲುವೆ ಮತ್ತು ಉಪ ಕಾಲುವೆ, ವಿತರಣಾ ಕಾಲುವೆ ಸಲುವಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳ ವಿವರ.<br>ಕೊಪ್ಪಳ ತಾಲ್ಲೂಕಿನಲ್ಲಿ ಬರುವ ಗ್ರಾಮಗಳು<br>ಕವಲೂರು 43-05 ಎಕರೆ<br>ಅಳವಂಡಿ 17-32 ಎಕರೆ<br>ನರಸಿಪುರ 01-02 ಎಕರೆ<br>ಹಂದ್ರಾಳ 05-22 ಎಕರೆ<br>ಬಿಕನಳ್ಳಿ 00-11 ಎಕರೆ<br>ಮೈನಳ್ಳಿ 11-00 ಎಕರೆ<br>ಹಿರೇಸಿಂಧೋಗಿ 19-02 ಎಕರೆ<br>**<u>ಕೂಕನೂರು ತಾಲ್ಲೂಕಿನಲ್ಲಿ</u>**<br>**<u>ಬರುವ ಗ್ರಾಮಗಳು</u>**<br>ಕೋಮಲಾಪುರ 06-30 ಎಕರೆ<br>ತಳಕಲ್ಲು: <u>06-02 ಎಕರೆ</u><br>**<u>ಒಟ್ಟು: 110-26 ಎಕರೆ</u>** |
| ಆ. | ಈ ರೀತಿ ಸ್ವಾಧೀನಪಡಿಸಿಕೊಳ್ಳಲು ಮತ್ತು ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲು ಇರುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಭೂಸ್ವಾಧೀನ ಕಾಯ್ದೆ 2013 ರ ಕಲಂ 19(1) (2) ರ ಘೋಷಣೆಯಾದಂತೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ಅನ್ವಯ ಯೋಜನೆಗೆ ಅವಶ್ಯವಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಕಲಂ 26 ರಿಂದ 30 ರಲ್ಲಿನ ಮಾನದಂಡಗಳನುಸಾರ ಕಲಂ 23 ರಡಿ ಸಿದ್ದಪಡಿಸಿದ ಜಮೀನುಗಳ ಪರಿಹಾರ ಮೊತ್ತದ ಐ-ತೀರ್ಪಿಗೆ ಅನುಮೋದನೆ ನೀಡಿ, ನಂತರ ಪರಿಹಾರ ಧನ ನೀಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ. | ಕಳೆದ 6 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯ "ಅಳವಂಡಿ-ಬೇಟಗೇರಿ" ಏತ ನೀರಾವರಿ ಯೋಜನೆಯಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಎಷ್ಟು ಮೊತ್ತದ ಪರಿಹಾರ ನೀಡಲಾಗಿದೆ; (ತಾಲ್ಲೂಕುವಾರು/ ಗ್ರಾಮವಾರು ಸಂಪೂರ್ಣ ವಿವರ ನೀಡುವುದು) | ಅಳವಂಡಿ ಬೇಟಗೇರಿ ಏತ ನೀರಾವರಿ ಯೋಜನೆಯ ಚಾಕ್‌ವೆಲ್, ರೈಸಿಂಗ್ ಮೇನ್ ಹಾಗೂ ಡೆಲಿವರಿ ಚೆಂಬರ್ ನಿರ್ಮಾಣಕ್ಕಾಗಿ **ಕೊಪ್ಪಳ ತಾಲ್ಲೂಕಿನ** ಕವಲೂರು, ಅಳವಂಡಿ, ಬೆಟಗೇರಿ, ಮೋರನಹಳ್ಳಿ, ಹನಕುಂಟಿ, ಗ್ರಾಮಗಳಡಿ ಭೂಸ್ವಾಧೀನಪಡಿಸಿಕೊಂಡ ಒಟ್ಟು 36-23 ಎಕರೆ ಪ್ರದೇಶಕ್ಕೆ ರೂ: 2,68,45,902.00 ಪರಿಹಾರ ಧನ ನೀಡಲಾಗಿದೆ.<br>ಸದರಿ ಯೋಜನೆಯಲ್ಲಿ ಕಾಲುವೆ ಮತ್ತು ಉಪ ಕಾಲುವೆ, ವಿತರಣಾ ಕಾಲುವೆಗಳ ನಿರ್ಮಾಣಕ್ಕಾಗಿ **ಕೊಪ್ಪಳ ತಾಲ್ಲೂಕಿನ** ಕವಲೂರು, ಅಳವಂಡಿ, ನರಸಿಪುರ, ಹಂದ್ರಾಳ, ಬಿಕನಳ್ಳಿ, ಮೈನಳ್ಳಿ, ಹಿರೇಸಿಂಧೋಗಿ ಹಾಗೂ ಕೂಕನೂರು ತಾಲ್ಲೂಕಿನ ಕೋಮಲಾಪುರ ಹಾಗೂ ತಳಕಲ್ಲು ಗ್ರಾಮಗಳಡಿ ಭೂಸ್ವಾಧೀನಪಡಿಸಿಕೊಂಡ ಒಟ್ಟು 110-26 ಎಕರೆ ಪ್ರದೇಶಕ್ಕೆ ರೂ: 8,70,28,803/- ಪರಿಹಾರ ಧನ ಮೊತ್ತದ ಐ-ತೀರ್ಪಿಗೆ ಅನುಮೋದನೆ ಪಡೆಯಲಾಗಿದ್ದು, ಭೂಪರಿಹಾರ ವಿತರಣೆ ಕಾರ್ಯವನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಕೊಪ್ಪಳ ರವರು ಕ್ರಮ ವಹಿಸಿರುತ್ತಾರೆ. |
| ಈ. | ಕಳೆದ 6 ವರ್ಷಗಳಲ್ಲಿ ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ "ಅಳವಂಡಿ-ಬೇಟಗೇರಿ" ಯೋಜನೆಗೆ ಸಂಬಂಧಿಸಿದಂತೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ ನೀಡುವಲ್ಲಿ ಪ್ರಾಧಿಕಾರದ ವಿರುದ್ಧ ರೈತರು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಹೋದ ಪ್ರಕರಣಗಳು ಎಷ್ಟು; ಈ ರೀತಿ ಪ್ರಾಧಿಕಾರದ ವಿರುದ್ಧ ನ್ಯಾಯಾಲಯಕ್ಕೆ ಹೋಗಲು ಭೂ ಸ್ವಾಧೀನ ಕಾಯ್ದೆಯ ಮಾನದಂಡದಲ್ಲಿರುವ ನ್ಯೂನತೆಗಳೇನು; (ಪ್ರಕರಣವಾರು/ ಯೋಜನೆವಾರು ಸಂಪೂರ್ಣ ವಿವರ ನೀಡುವುದು) | ಅಳವಂಡಿ ಬೇಟಗೇರಿ ಏತ ನೀರಾವರಿ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಹೆಚ್ಚಿನ ಭೂಪರಿಹಾರ ಕೋರಿ ಗೌರವಾನ್ವಿತ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಲಯ, ಕೊಪ್ಪಳದಲ್ಲಿ ದಾಖಲಿಸಿರುವ ಒಟ್ಟು ಪ್ರಕರಣಗಳು :10 |
| ಉ. | ಇದರಿಂದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ವಿವರ ನೀಡುವುದು) | ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿನ ನೀರಾವರಿ ಯೋಜನೆಗಳಿಗೆ ಅಗತ್ಯವಿರುವ ಭೂಮಿಯನ್ನು ಭೂಸ್ವಾಧೀನ ಕಾಯ್ದೆ 2013 ರನ್ವಯ ಸ್ವಾಧೀನಪಡಿಸಿಕೊಂಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

ಜಸಂಇ 123 ಎಂಎಲ್ಎ 2023

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ